# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 704 |
| ಸದಸ್ಯರ ಹೆಸರು | : | ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾಗಿದ ದಿನಾಂಕ | : | 12.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಹಜ್ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2023-24ನೇ ಸಾಲಿನಲ್ಲಿ ಚಿಕ್ಕಮಗಳೂರು ನಗರಸಭೆಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆ ಮಾಡಲಾಗಿದೆ; | 2023-24ನೇ ಸಾಲಿನಲ್ಲಿ ಚಿಕ್ಕಮಗಳೂರು ನಗರಸಭೆಗೆ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ.<br>• **15ನೇ ಹಣಕಾಸು ಆಯೋಗದ ಅನುದಾನ:**<br>2023-24ನೇ ಸಾಲಿನಲ್ಲಿ 15ನೇ ಹಣಕಾಸು ಆಯೋಗದ ಅನುದಾನದಡಿ ಚಿಕ್ಕಮಗಳೂರು ನಗರಸಭೆಗೆ ರೂ.614.00 ಲಕ್ಷಗಳು ಹಂಚಿಕೆಯಾಗಿದ್ದು, ಇಲ್ಲಿಯವರೆಗೆ ಅನುದಾನ ಬಿಡುಗಡೆಯಾಗಿರುವುದಿಲ್ಲ.<br>ಹಂಚಿಕೆಯಾದ ಅನುದಾನದಲ್ಲಿ ಚಿಕ್ಕಮಗಳೂರು ನಗರಸಭೆಯು ಕೈಗೊಂಡ ಕಾಮಗಾರಿಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br>ಚಿಕ್ಕಮಗಳೂರು ನಗರಸಭೆಗೆ 2021-22ನೇ ಸಾಲಿನ MPC ಅನುದಾನ ರೂ.210.00 ಲಕ್ಷಗಳನ್ನು 2023-24ನೇ ಸಾಲಿನಲ್ಲಿ ಹಂಚಿಕೆ ಮಾಡಿ ಬಿಡುಗಡೆಗೊಳಿಸಿದೆ. ಸದರಿ ಅನುದಾನದಲ್ಲಿ ಕೈಗೊಳ್ಳುವ ನೀರು ಸರಬರಾಜು ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಯ ಕಾಮಗಾರಿಗಳ ಕ್ರಿಯಾ ಯೋಜನೆ ತಯಾರಿಸಿ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆಯಲು ಸೂಚಿಸಲಾಗಿದೆ.<br>• ಕೇಂದ್ರ ಪುರಸ್ಕೃತ ಸ್ವಚ್ಛ ಭಾರತ ಮಿಷನ್-2.0 ಯೋಜನೆಯಡಿ 2023-24ನೇ ಸಾಲಿನಲ್ಲಿ ಚಿಕ್ಕಮಗಳೂರು ನಗರಸಭೆಗೆ ಮಾಹಿತಿ, ಶಿಕ್ಷಣ ಮತ್ತು ಸಂವಹನೆ ಘಟಕದಡಿ ಸಾರ್ವಜನಿಕರಿಗೆ ಘನತ್ಯಾಜ್ಯ ಮತ್ತು ಪ್ಲಾಸ್ಟಿಕ್ ತ್ಯಾಜ್ಯ ವಸ್ತುಗಳ ನಿರ್ವಹಣೆ ಕುರಿತು ಅರಿವು ಮೂಡಿಸಲು ರೂ.4.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.<br>• **ಎಸ್.ಎಫ್.ಸಿ ಮುಕ್ತ ನಿಧಿ:**<br>2023-24 ನೇ ಸಾಲಿನ ಮುಕ್ತನಿಧಿ ಯೋಜನೆಯಡಿ ಚಿಕ್ಕಮಗಳೂರು ನಗರಸಭೆಗೆ ರೂ.286.00 ಲಕ್ಷಗಳು ಹಂಚಿಕೆಯಾಗಿ ರೂ.58.90 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನಕ್ಕೆ 15 ಕಾಮಗಾರಿಗಳು ಅನುಮೋದನೆಯಾಗಿ 01 ಕಾಮಗಾರಿ ಪೂರ್ಣಗೊಂಡಿದ್ದು, 03 ಕಾಮಗಾರಿಗಳು ಪ್ರಗತಿಯಲ್ಲಿದ್ದು 12 ಕಾಮಗಾರಿಗಳು ಟೆಂಡರ್ ಕರೆಯುವ ಹಂತದಲ್ಲಿರುತ್ತದೆ. ಕಾಮಗಾರಿಗಳ ವಿವರವನ್ನು **ಅನುಬಂಧ 02 ರಲ್ಲಿ** ನೀಡಲಾಗಿದೆ.<br>**ಕುಡಿಯುವ ನೀರು ಯೋಜನೆ :**<br>2023-24ನೇ ಸಾಲಿನ ಕುಡಿಯುವ ನೀರಿನ ಯೋಜನೆಯಡಿ ಚಿಕ್ಕಮಗಳೂರು ನಗರಸಭೆಗೆ ರೂ.2.36 ಲಕ್ಷಗಳು |

<table>
<tr>
<td></td>
<td></td>
<td>ಹಂಚಿಕೆಯಾಗಿ ರೂ.2.36 ಲಕ್ಷಗಳು ಈ ತಹಲ್‌ವರೆಗೂ ಬಿಡುಗಡೆಯಾಗಿರುತ್ತದೆ. ಸದರಿ ಅನುದಾನಕ್ಕೆ 01 ಕಾಮಗಾರಿ ಟೆಂಡರ್ ಕರೆಯುವ ಹಂತದಲ್ಲಿರುತ್ತದೆ. ಕಾಮಗಾರಿಗಳ ವಿವರವನ್ನು ಅನುಬಂಧ 03 ರಲ್ಲಿ ನೀಡಲಾಗಿದೆ.<br><br>• 2023-24ನೇ ಸಾಲಿನಲ್ಲಿ ಚಿಕ್ಕಮಗಳೂರು ನಗರಸಭೆಗೆ ನಗರೋತ್ಥಾನ ಹಂತ-3 ಮತ್ತು ಹಂತ-4ರ ಯೋಜನೆಯಡಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.</td>
</tr>
<tr>
<td>ಆ)</td>
<td>ಈ ನಗರಸಭೆಯಲ್ಲಿ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ ಅಭಿವೃದ್ಧಿ ಮತ್ತು ಚರಂಡಿ ನಿರ್ಮಾಣ ಹಾಗೂ ಕುಡಿಯುವ ನೀರಿನ ಸೌಲಭ್ಯವನ್ನು ಕಲ್ಪಿಸಬೇಕಾಗಿರುವುದರಿಂದ ಸರ್ಕಾರ ಹೆಚ್ಚಿನ ಅನುದಾನವನ್ನು ನೀಡಲು ಯಾವ ಕ್ರಮವನ್ನು ಕೈಗೊಂಡಿದೆ?</td>
<td>• 15ನೇ ಹಣಕಾಸು ಯೋಜನೆ:<br>ಸರ್ಕಾರದ ವಿವಿಧ ಯೋಜನೆಯಡಿ ಚಿಕ್ಕಮಗಳೂರು ನಗರಸಭೆಗೆ ಲಭ್ಯವಾಗುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅನುದಾನದಿಂದ ಮತ್ತು ನಗರಸಭೆಯ ಸ್ವಂತ ಸಂಪನ್ಮೂಲಗಳಿಂದ ಕ್ರೋಢೀಕರಿಸಿ, ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ಹಾಗೂ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಕಾಮಗಾರಿಗಳನ್ನು ಹಂತಹಂತವಾಗಿ ಅನುದಾನ ಲಭ್ಯತೆಗನುಗುಣವಾಗಿ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಯೋಜನೆಯ ಮಾರ್ಗಸೂಚಿಗಳಂತೆ ನೀಡಲಾಗುತ್ತಿದೆ.<br>• ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಮೂಲಭೂತ ಸೌಕರ್ಯಗಳಾದ ವೈಯಕ್ತಿಕ ಶೌಚಾಲಯಗಳ ನಿರ್ಮಾಣ, ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗೆ ಅಗತ್ಯವಿರುವ ಅನುದಾನವನ್ನು ಚಿಕ್ಕಮಗಳೂರು ನಗರಸಭೆ ರವರ ಪ್ರಸ್ತಾವನೆಯ ಆಧಾರದ ಮೇಲೆ ರಾಜ್ಯ ಮಟ್ಟದ ತಾಂತ್ರಿಕ ಸಮಿತಿಯಲ್ಲಿ ಅನುಮೋದನೆಗೊಂಡ ಕ್ರಿಯಾ ಯೋಜನೆಯ ರೀತ್ಯಾ ಕಾಲಕಾಲಕ್ಕೆ ಅನುದಾನವನ್ನು ಬಿಡುಗಡೆ ಮಾಡಲು ನಿಯಮಾನುಸಾರ ಅಗತ್ಯ ಕ್ರಮವಹಿಸಲಾಗುತ್ತದೆ. ಚಿಕ್ಕಮಗಳೂರು ನಗರಸಭೆಗೆ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಈವರೆಗೂ ಬಿಡುಗಡೆಯಾದ ಅನುದಾನದ ವಿವರ ಕೆಳಕಂಡಂತ್ತಿದೆ.<br>(ರೂ ಲಕ್ಷಗಳಲ್ಲಿ)
<table>
<tr><th>ಸ್ವಚ್ಛ ಭಾರತ ಮಿಷನ್ ಯೋಜನೆ</th><th>ಘನತ್ಯಾಜ್ಯ ವಸ್ತು ನಿರ್ವಹಣೆ</th><th>ವೈಯಕ್ತಿಕ ಶೌಚಾಲಯಗಳ ನಿರ್ಮಾಣ</th></tr>
<tr><td>ಚಿಕ್ಕಮಗಳೂರು ನಗರಸಭೆಗೆ ಬಿಡುಗಡೆಯಾದ ಅನುದಾನ</td><td>1654.67</td><td>107.01</td></tr>
</table>
• ಚಿಕ್ಕಮಗಳೂರು ನಗರಸಭೆಗೆ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳಾದ ರಸ್ತೆ ಅಭಿವೃದ್ಧಿ ಚರಂಡಿ ಕುಡಿಯುವ ನೀರಿನ ಯೋಜನೆಗೆ ಹೆಚ್ಚುವರಿ ಅನುದಾನ ಅವಶ್ಯವಿರುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br><br>• 2023-24ನೇ ಸಾಲಿನಲ್ಲಿ ನಗರೋತ್ಥಾನ 2ನೇ ಮತ್ತು 3ನೇ ಕಂತನ್ನು ಬಿಡುಗಡೆಯಾಗಿದ್ದು, ಅನುದಾನದ ಲಭ್ಯತೆಗೆ ಅನುಗುಣವಾಗಿ ಚಿಕ್ಕಮಗಳೂರು ನಗರಸಭೆಗೆ ಬಿಡುಗಡೆ ಮಾಡಲು ಕ್ರಮವಹಿಸಲಾಗುವುದು.</td>
</tr>
</table>

ಕಡತ ಸಂಖ್ಯೆ:ನಅಇ 312 ಎಸ್‌ಎಫ್‌ಸಿ 2023

**(ರಹೀಂ ಖಾನ್)**
ಪೌರಾಡಳಿತ ಮತ್ತು ಹಜ್ ಸಚಿವರು

**ರಹೀಂ ಖಾನ್**
**ಪೌರಾಡಳಿತ ಮತ್ತು ಹಜ್ ಸಚಿವರು**

-704

# ಅನುಬಂಧ – 01

## ನಗರಸಭೆ, ಚಿಕ್ಕಮಗಳೂರು

ಯೋಜನೆ: 15ನೇ ಹಣಕಾಸು ಮೂಲ ಅನುದಾನ 2023-24

| ಕ್ರ.ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 1 | ಕೇಂದ್ರ ಪುರಸ್ಕೃತ ಅಮೃತ್ 1.0 ಯೋಜನೆಯಡಿ ಚಿಕ್ಕಮಗಳೂರು ನಗರದಲ್ಲಿ ಕೆ.ಯು.ಡಬ್ಲ್ಯೂ.ಎಸ್ ವತಿಯಿಂದ ಅನುಷ್ಠಾನಗೊಳಸುತ್ತಿರುವ ನೀರು ಸರಬರಾಜು ಯೋಜನೆ ಕಾಮಗಾರಿಗೆ ಹೆಚ್ಚುವರಿಯಾದ ಮೊತ್ತದ ಶೇ.50 ರಷ್ಟು ಮೊತ್ತ ರೂ. 1055.54 ಲಕ್ಷಗಳನ್ನು ಚಿಕ್ಕಮಗಳೂರು ನಗರಸಭೆ ಭರಿಸಬೇಕಾಗಿದ್ದು ಈ ಬಾಬ್ತು ಲಭ್ಯವಿರುವ ರೂ. 184.20 ಲಕ್ಷಗಳನ್ನು ಕೆ.ಯು.ಡಬ್ಲ್ಯೂ.ಎಸ್‌ಗೆ ಪಾವತಿಸುವುದು. | 184.20 | ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ |
| 2 | ವಾರ್ಡ್ ನಂ.26ರ ಡಿಸಿಸಿ ಬ್ಯಾಂಕ್ ಹಿಂಭಾಗದ ಕನ್ವರ್‌ವೆನ್ಸಿ ರಸ್ತೆ ಅಂಚೆ ಲಿಂಗಣ್ಣ ಬೀದಿಯ ಹಳೆ ಕೊಳವೆ ಮಾರ್ಗ ಬದಲಾಯಿಸಿ ಮ್ಯಾನ್ ಹೋಲ್ ನಿರ್ಮಾಣ ಮಾಡುವುದು. ವಾ.ನಂ 14ರ ಐಸಿಐಸಿಐ ಬ್ಯಾಂಕ್ ಹಿಂಭಾಗದಿಂದ (ಅಗಸರ ಬೀದಿ) ಕೆನರಾ ಬ್ಯಾಂಕ್ ರಸ್ತೆವರೆಗೆ ಹಳೆಯ ಒಳಚರಂಡಿ ಕೊಳವೆ ಮಾರ್ಗ ಬದಲಾಯಿಸಿ ಮ್ಯಾನ್‌ಹೋಲ್ ನಿರ್ಮಾಣ ಮಾಡುವುದು. | 30.00 | |
| 3 | ನಗರದ ಶೃಂಗಾರ್ ಸರ್ಕಲ್‌ನಲ್ಲಿ ತರೀಕೆರೆ ರಸ್ತೆ ಕಡೆಗೆ ಮತ್ತು ಕಡೂರು ರಸ್ತೆ ಕಡೆಗೆ ಎರಡು ಬಸ್ ನಿಲ್ದಾಣ ನಿರ್ಮಾಣ. | 10.00 | |
| 4 | ನಗರದ ವಾರ್ಡ್.ನಂ.26ರ ಬಸವನಹಳ್ಳಿಯಲ್ಲಿ ಅಂಗನವಾಡಿ ಕಟ್ಟಡ ನಿರ್ಮಾಣ | 20.60 | |
| 5 | ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾರ್ಡ್.ನಂ.34ರ ಚಂದ್ರನಗರದಲ್ಲಿರುವ ಹಿಂದೂ ಸ್ಮಶಾನ ಅಭಿವೃದ್ಧಿ ಕಾಮಗಾರಿ | 30.00 | |
| 6 | ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾರ್ಡ್.ನಂ.03ರ ಹಿರೇಮಗಳೂರಿನಲ್ಲಿರುವ ಹಿಂದೂ ಸ್ಮಶಾನದ ಮುಂದುವರಿದ ಕಾಮಗಾರಿ. | 10.00 | |
| 7 | ಚಿಕ್ಕಮಗಳೂರು ನಗರಸಭಾ ವ್ಯಾಪ್ತಿಯ ವಾರ್ಡ್.ನಂ.34ರ ರಾಮನಹಳ್ಳಿಯಲ್ಲಿರುವ ಹಿಂದೂ ಸ್ಮಶಾನದ ಮುಂದುವರಿದ ಕಾಮಗಾರಿ. | 10.00 | |
| 8 | ನಗರಸಭಾ ಕಛೇರಿಯ ಆವರಣದ ಉದ್ಯಾನವನಕ್ಕೆ ಅಲಂಕಾರಿಕ ವಿದ್ಯುತ್ ದೀಪಗಳನ್ನು ಅಳವಡಿಸುವುದು. | 25.00 | |
| 9 | ಇಂದಾವರ ಘನತ್ಯಾಜ್ಯ ವಸ್ತು ವಿಲೇವಾರಿ ಪ್ರದೇಶದಲ್ಲಿನ ವಿಂಡ್ರೋ ಫ್ಲಾಟ್‌ಫಾರಂಗೆ ರಿಟೆನಿಂಗ್ ವಾಲ್ ನಿರ್ಮಾಣ | 40.00 | |
| 10 | ನಗರದ ದೈನಂದಿನ ಕಸ ಸಂಗ್ರಹಿಸುವ ಆಟೋ ಟಿಪ್ಪರ್‌ಗಳಿಂದ ಕಾಂಪ್ಯಾಕ್ಟರ್ ವಾಹನಕ್ಕೆ ಕಸವನ್ನು ಲೋಡ್ ಮಾಡಲು ನಗರದ ಗೌರಿಕಾಲುವೆ 60 ಅಡಿ ರಸ್ತೆಯ ಬಳಿ ನಿರ್ಮಿಸಿರುವ ಪ್ಲಾಟ್‌ಫಾರಂನ ಆವರಣಕ್ಕೆ ಕಾಂಕ್ರೀಟ್, ಸುತ್ತಲೂ ಕಾಂಪೌಂಡ್, ಬಾಕ್ಸ್ ಚರಂಡಿ, ಡೆಕ್‌ಸ್ಲ್ಯಾಬ್ ಮತ್ತು ವಾಚ್‌ಮ್ಯಾನ್ ಶೆಡ್ ನಿರ್ಮಾಣ. | 80.00 | |
| 11 | ಇಂದಾವರ ಘನತ್ಯಾಜ್ಯ ವಸ್ತು ವಿಲೇವಾರಿ ಪ್ರದೇಶದಲ್ಲಿನ ಸಂಗ್ರಹವಾಗಿರುವ ಪಾರಂಪರಿಕ ತ್ಯಾಜ್ಯ (ಲೆಗಸಿ ವೇಸ್ಟ್) ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಕಾಮಗಾರಿಗೆ ಹೊಂದಾಣಿಕೆ ಮೊತ್ತ. | 24.20 | |

Assistant Director (Development)
Directorate of Municipal
Administration
Bengaluru

ಅನುಬಂಧ - 1

# Workwise Progress of SFC UNTIED 2023-24 Report

| S.No | DistrictName | UlbName | Sector Name | Work Name | Estimate Cost (Rs. in Lakhs) | Expenditure Cost (Rs. in Lakhs) | Work Status |
|---|---|---|---|---|---|---|---|
| 1 | Chikkamagaluru | Chikkamagaluru | Other Works | reserving amount of pks salary for the year 2023 24 | 211 | 50 | Work Started |
| 2 | Chikkamagaluru | Chikkamagaluru | Other Works | reserving amount for 7.25 schme | 0.43 | 0 | Work Started |
| 3 | Chikkamagaluru | Chikkamagaluru | Other Works | Reserving amount for 5 percent scheme | 0.3 | 0 | Work Started |
| 4 | Chikkamagaluru | Chikkamagaluru | Parks and Gardens | development of park in ward no 6 near karant appartment | 5.17 | 0 | Tender to be Invited |
| 5 | Chikkamagaluru | Chikkamagaluru | Other Works | Reserving amount for powrakarmikas health checkup medical re embarcment safety equpments and for construction of house | 9.8 | 4.9 | Work Completed |
| 6 | Chikkamagaluru | Chikkamagaluru | Other Works | providing subsidy for micro enterprenueres belongs to SC | 5 | 0 | Under Tender Process |
| 7 | Chikkamagaluru | Chikkamagaluru | Other Works | providing financial assistance to SC individuals to construct pakka house if they have own lands | 3 | 0 | Tender to be Invited |
| 8 | Chikkamagaluru | Chikkamagaluru | Other Works | providing financial assistance advocates to purchase books | 1 | 0 | Tender to be Invited |
| 9 | Chikkamagaluru | Chikkamagaluru | Other Works | providing one time financial assistance for repair of house damaged by flood | 0.8 | 0 | Tender to be Invited |
| 10 | Chikkamagaluru | Chikkamagaluru | Other Works | Reserving amount for powrakarmikas health checkup medical re embarcment safety equpments and for construction of house | 4 | 4 | Work Completed |
| 11 | Chikkamagaluru | Chikkamagaluru | Other Works | providing subsidy for micro enterprenueres belongs to ST | 3 | 0 | Tender to be Invited |
| 12 | Chikkamagaluru | Chikkamagaluru | Other Works | providing financial assistance to ST individuals to construct pakka house if they have own lands | 3 | 0 | Tender to be Invited |
| 13 | Chikkamagaluru | Chikkamagaluru | Other Works | providing one time financial assistance for repair of house damaged by flood | 0.4 | 0 | Tender to be Invited |
| 14 | Chikkamagaluru | Chikkamagaluru | Storm Water Drains | Construction of box drain in hakki pikki colony in ward no. 18 | 5 | 0 | Under Tender Process |
| 15 | Chikkamagaluru | Chikkamagaluru | Storm Water Drains | Construction of box darin from kempanahalli shekarappa house to gante manju house in ward no. 35 | 4.6 | 0 | Under Tender Process |
| | | | | TOTAL | 256.5 | 58.9 | |

Chief Project Officer
Directorate of Municipal Administration

## Workwise Progress of SFC Drinking Water 2023-24 Report

| S.No | DistrictName | UlbName | Sector Name | Work Name | Estimate Cost | Expenditure Cost | Work Status |
|---|---|---|---|---|---|---|---|
| | | | | | Rs. in Lakhs | | |
| 1 | Chikkamagaluru | Chikkamagaluru | Water Supply | Drilling of new borewell and installation of motor and pipe line work in Ward No. 09 Srinivasanagar chickmagalur | 2.36 | 0 | Under Tender Process |